ದಿನಾಂಕಃ 05-08-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ವಿ ಆರ್ ವಕೀಲರಿಂದಃ**

ಕಛೇರಿಯನ್ನು ಸಂಜೆ 5.30ರ ಸವಮಯದಲ್ಲಿ ಬಿಟ್ಟಿರುತ್ತೇವೆ. ಪಂಚರನ್ನು ನಾನೇ ಬರಮಾಡಿಕೊಂಡಿರುತ್ತೇನೆ. ನಿಪಿ-3ರ ಸ್ವ ದೂರಿನದಲ್ಲಿ ಪಂಚರನ್ನು ಕರೆದುಕೊಂಡ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಪಂಚನಾಮೆಯಲ್ಲಿ ನಮೂದು ಮಾಡಲಾಗಿದೆ ಎಂದು ನುಡಿದಿರುತ್ತಾರೆ. ನಿಪಿ-2ರ ಕಾಲಕ್ಕೆ ಗೊಬ್ಬರದ ಚೀಲವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ಸ್ವತ್ತು ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-2 ರ ಕಾಲಕ್ಕೆ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ಮಧ್ಯದ ಟೆಟ್ರಾ ಪ್ಯಾಕ್ ಗಳನ್ನು ಎಲ್ಲಿಂದ ಖರಿದಿಸಿ ತಂದರು ಎಂಬುದನ್ನು ಕೇಳಲಾಯಿತೇ ಎಂದರೆ ಇಲ್ಲ. ಘಟನಾ ಕಾಲಕ್ಕೆ ಪೋಟೋ ತೆಗೆಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

2. ಆರೋಪಿಯು ಯಾವುದೇ ಮಧ್ಯದೊಂದಿಗೆ ಘಟನಾ ಸ್ಥಳದಲ್ಲಿ ಸಿಗದಿದ್ದರೂ ಚುನಾವಣಾ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಿಂದ ನಿಪಿ-4 ಹಾಗೂ ಮು ಮಾ 1 ನ್ನು ಸೃಷ್ಟಿ ಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರ ವಸ್ತುಗಳಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.